# ಬನ್ನಿ, ಗುಂಪುಹಲ್ಲೆ ಎಂಬ ಕಳಂಕ ತೊಳೆಯಲು ಕೈಜೋಡಿಸೋಣ

ಗುಂಪುಹಲ್ಲೆ ಅನಾಗರಿಕ ಕೃತ್ಯ ಎಂಬುದನ್ನು ಸೈದ್ಧಾಂತಿಕ ಭಿನ್ನಾಭಿಪ್ರಾಯ ಬದಿಗೆ ಇರಿಸಿ ಒಪ್ಪಿಕೊಳ್ಳಬೇಕು. ಈ ಕೃತ್ಯ ನಡೆಸಿದವರನ್ನು ಬಗ್ಗುಬಡಿಯಲು ಪಕ್ಷಭೇದ ಮರೆತು ಎಲ್ಲರೂ ಸಹಕರಿಸಬೇಕು.

ರಾಷ್ಟ್ರೀಯ ಅವಮಾನ ಎನ್ನಬಹುದಾದ, ಆದರೆ ವಾಸ್ತವದಲ್ಲಿ ನಡೆಯುತ್ತಿರುವ ಕ್ರೌರ್ಯದ ಬಗ್ಗೆ ಸಮಾಜ ಏಕೆ ಇಷ್ಟೊಂದು ತಣ್ಣನೆಯ ಪ್ರತಿಕ್ರಿಯೆ ನೀಡುತ್ತಿದೆ? ಈ ಪ್ರಶ್ನೆಯನ್ನು ಕೇಳಿಕೊಳ್ಳಬೇಕಿರುವುದು, ಒಂದಷ್ಟು ಜನ ಸೇರಿ ನಡೆಸುತ್ತಿರುವ 'ಗುಂಪುಹಲ್ಲೆ'ಗಳ (ಲಿಂಚಿಂಗ್) ಬಗ್ಗೆ. ಯಾವುದೇ ಜೀವಪರ ಸಮಾಜದಲ್ಲಿ ನಡೆಯಬಾರದ ಕ್ರೌರ್ಯ ಇದು. ಆದರೆ, ಇದು ಈಗ ಭಾರತದ ಹಲವೆಡೆ ನಡೆದಿದೆ. ಸಮಾಜದ ದುರ್ಬಲ ವರ್ಗಗಳಿಗೆ ಸೇರಿದವರು ಇದಕ್ಕೆ ನೇರ ಗುರಿಯಾಗಿದ್ದಾರೆ. ಈ ಗುಂಪುಹಲ್ಲೆಗಳ ಬಗ್ಗೆ ಕಳವಳ ವ್ಯಕ್ತಪಡಿಸಿ ನಲವತ್ತೊಂಬತ್ತು ಮಂದಿ ಗಣ್ಯರು ದೇಶದ ಪ್ರಧಾನಿಗೆ ಪತ್ರ ಬರೆದಾಗ, ಅವರ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಾದ ವೈಚಿತ್ರ್ಯ ಕೂಡ ನಡೆಯಿತು. ಕೊನೆಗೆ, ವಿವಿಧ ವಲಯಗಳಿಂದ ವಿರೋಧ ವ್ಯಕ್ತವಾದಾಗ ದೇಶದ್ರೋಹದ ಪ್ರಕರಣ ಕೈಬಿಡಲಾಯಿತು. ಈಚೆಗೆ, ಅಂದರೆ ವಿಜಯದಶಮಿಯ ದಿನ ಮಾಡಿದ ಭಾಷಣದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಮೋಹನ್ ಭಾಗವತ್ ಅವರು, ಇಂತಹ ಹಲ್ಲೆಗಳು ಪಶ್ಚಿಮದ ಪರಿಕಲ್ಪನೆಯೇ ವಿನಾ ಭಾರತದ್ದಲ್ಲ ಎಂದರು. ಮುಂದುವರಿದು ಅವರು, ಇದು, 'ಹಿಂದೂ ಸಮುದಾಯ ಹಾಗೂ ಭಾರತದ ಹೆಸರು ಹಾಳು ಮಾಡಲು ನಡೆಸಿದ ಹುನ್ನಾರ' ಎಂದೂ ಹೇಳಿದರು.

ಕ್ರೌರ್ಯಕ್ಕೆ ಪೂರ್ವ–ಪಶ್ಚಿಮ, ಸ್ವದೇಶ–ಪರದೇಶಗಳು ಎಂಬ ವ್ಯತ್ಯಾಸ ಇದೆಯೇ ಎನ್ನುವ ಪ್ರಶ್ನೆಯನ್ನು ಬದಿಗೆ ಇರಿಸೋಣ. ಭಾಗವತರು ಹೇಳಿದಂತೆ ಈ ಕ್ರಿಯೆಯು ಭಾರತ ಮೂಲದ್ದು ಅಲ್ಲವೇ ಅಲ್ಲ, ಇದು ಸಂಪೂರ್ಣವಾಗಿ ಪಶ್ಚಿಮದ್ದು ಎಂದೇ ಭಾವಿಸೋಣ. ಆದರೆ, ಇಂತಹ ಕೃತ್ಯಗಳು ಭಾರತದಲ್ಲಿ ನಡೆದಿವೆ ಎಂಬುದು ವಾಸ್ತವ. ಮುಂದೆ ನಡೆಯುವುದಿಲ್ಲ ಎಂದು ಖಚಿತವಾಗಿ ಹೇಳಲು ಬೇಕಾದ ಮುನ್ಸೂಚನೆಗಳೂ ಕಾಣಿಸುತ್ತಿಲ್ಲ. ಹೀಗಿರುವಾಗ, ಸಮಾಜದಲ್ಲಿ ಚರ್ಚೆ ನಡೆಯಬೇಕಿರುವುದು ಗುಂಪುಹಲ್ಲೆ ಎಂಬ ಅಮಾನುಷ ಕೃತ್ಯಗಳಿಗೆ ಕಾರಣ ಏನು, ಅವುಗಳನ್ನು ತಡೆಯುವುದು ಹೇಗೆ ಎನ್ನುವ ನೆಲೆಯಲ್ಲಿ. ಈ ಕೃತ್ಯಗಳು ದೇಶಕ್ಕೆ ಮತ್ತು ಹಿಂದೂ ಸಮುದಾಯಕ್ಕೆ ಕಳಂಕ ತರುವ ಉದ್ದೇಶದಿಂದ ನಡೆದಿರಬಹುದೇ? ಈ ಬಗ್ಗೆ ವಿಸ್ತೃತ ಪರಿಶೀಲನೆ ಅಥವಾ ತನಿಖೆಯ ನಂತರವಷ್ಟೇ ತೀರ್ಮಾನಕ್ಕೆ ಬರಬಹುದು. ಆದರೆ, ಇವು ದೇಶಕ್ಕೆ ಕಳಂಕ ತರುವ ಪರಿಣಾಮ ಹೊಂದಿವೆ ಎಂಬುದಂತೂ ದಿಟ ಮತ್ತು ಅರಾಜಕತೆ ಸೃಷ್ಟಿಯಾಗುವ ಮುನ್ಸೂಚನೆ.

ಆರ್‌ಎಸ್‌ಎಸ್ ಎಂಬುದು ಭಾರತದ ಅತಿದೊಡ್ಡ ಸಂಘಟನೆ. ಅದರ ಮುಖ್ಯಸ್ಥರು ವಿಜಯದಶಮಿಯ ದಿನ ಮಾಡುವ ಭಾಷಣಕ್ಕೆ ಸಂಘಟನೆಯ ಕಾರ್ಯಕರ್ತರ ನಡುವೆ ಬಹುದೊಡ್ಡ ಮಹತ್ವ ಇರುತ್ತದೆ. ಹಾಗಾಗಿ, ಅವರ ಈ ಭಾಷಣದಲ್ಲಿ ಲಿಂಚಿಂಗ್ ತಡೆಯಲು ಕಾರ್ಯಕರ್ತರಿಗೆ ಇನ್ನಷ್ಟು ಸ್ಪಷ್ಟ ಮಾರ್ಗದರ್ಶನ ನೀಡಿದ್ದಿದ್ದರೆ ದೇಶದ ವರ್ಚಸ್ಸಿಗೆ ಅಂಟುತ್ತಿರುವ ಕಳಂಕ ನಿವಾರಣೆಯ ನಿಟ್ಟಿನಲ್ಲಿ ಬಹುದೊಡ್ಡ ಹೆಜ್ಜೆ ಇರಿಸಿದಂತೆ ಆಗುತ್ತಿತ್ತು.

ಕ್ರೌರ್ಯಕ್ಕೆ ಸಮುದಾಯ, ದೇಶ, ಭಾಷೆ, ಗಡಿಗಳ ಹಂಗು ಇಲ್ಲ. ಗುಂಪುಹಲ್ಲೆಗಳನ್ನು ನಿರ್ದಿಷ್ಟ ಸಮಯದಾಯ ಮಾತ್ರವೇ ನಡೆಸುತ್ತದೆ ಎಂಬುದನ್ನು ಹೇಳಲು ಆಧಾರಗಳಿಲ್ಲ. ಅದು ಮನುಷ್ಯನ ದೌರ್ಬಲ್ಯಗಳ ಕ್ರಿಯಾರೂಪ. ದುಷ್ಟತನ ಎಂಬ ದೌರ್ಬಲ್ಯ ತುಂಬಿರುವ ಮನುಷ್ಯ ಅಮಾಯಕನ ಮೇಲೆ ಹಲ್ಲೆ ನಡೆಸುತ್ತಾನೆ. ಆದರೆ, ಕ್ರೌರ್ಯಕ್ಕೆ ಒಳಗಾಗುವವರೆಲ್ಲರೂ ಬಹುತೇಕ ಸಂದರ್ಭಗಳಲ್ಲಿ ದುರ್ಬಲ ವರ್ಗಗಳಿಗೆ ಸೇರಿದವರೇ ಆಗಿರುತ್ತಾರೆ. ಗುಂಪುಹಲ್ಲೆ ಪ್ರಕರಣಗಳು ಈ ಮಾತಿಗೆ ಹೊರತಲ್ಲ. ಗುಂಪುಹಲ್ಲೆ ಪ್ರಕರಣಗಳಲ್ಲಿ ನೋವುಂಡವರು ಯಾರು ಎಂಬುದನ್ನು ಪರಿಶೀಲಿಸಿದರೆ ಇದು ಅರಿವಿಗೆ ಬರುತ್ತದೆ. ಇಂತಹ ವಿಚಾರಗಳಲ್ಲಿ ಕೂದಲು ಸೀಳುವ ತರ್ಕಗಳು ಸಮಸ್ಯೆಯ ಗಾಂಭೀರ್ಯವನ್ನು ತಗ್ಗಿಸುವ ಕೆಲಸವನ್ನಷ್ಟೇ ಮಾಡಬಲ್ಲವು.

ಮೊದಲ ಹೆಜ್ಜೆಯಾಗಿ, ಇವು ಅತ್ಯಂತ ಅನಾಗರಿಕ ಕೃತ್ಯಗಳು ಎಂಬುದನ್ನು ಸೈದ್ಧಾಂತಿಕ ಭಿನ್ನಾಭಿಪ್ರಾಯ ಬದಿಗೆ ಇರಿಸಿ ಒಪ್ಪಿಕೊಳ್ಳಬೇಕು. ಈ ಕೃತ್ಯ ನಡೆಸಿದವರನ್ನು ಬಗ್ಗುಬಡಿಯಲು ಪಕ್ಷಭೇದ ಮರೆತು ಎಲ್ಲರೂ ಸಹಕರಿಸಬೇಕು. ಗುಂಪುಹಲ್ಲೆ ನಡೆಸಿದ ಆರೋಪ ಎದುರಿಸುತ್ತಿರುವವರಿಗೆ ಹೂವಿನ ಹಾರ ಹಾಕುವ ಕೆಲಸಕ್ಕೆ ಯಾರೂ ಮುಂದಾಗಬಾರದು. ದೇಶಕ್ಕೆ ಅಂಟುತ್ತಿರುವ ಈ ಕಳಂಕವನ್ನು ತೊಳೆಯಲು ಭಾಗವತ್ ಅವರಂತಹ ನಾಯಕರೇ ಮುಂದಡಿ ಇಟ್ಟರೆ, ಅದರ ಪರಿಣಾಮ ವ್ಯಾಪಕವಾಗಿರುತ್ತದೆ. ಅವರ ಮಾತಿಗೆ ಕಿವಿಗೊಡುವ ಸರ್ಕಾರಗಳೇ ಈಗ ದೇಶವನ್ನೂ, ದೇಶದ ಅನೇಕ ರಾಜ್ಯಗಳನ್ನೂ ಆಳುತ್ತಿವೆ. ಕಳಂಕ ತೊಳೆಯಲು ಅವರಿಂದ ಇಂತಹ ನಡೆ ನಿರೀಕ್ಷಿಸಬಹುದೇ?!

■ ಎನ್. ಉದಯಕುಮಾರ್



ಈಶ್ವರ